ಕೋಲಾರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವುದು.

41 (735) ಶ್ರೀ ಎಂ.ವಿ. ವೆಂಕಟಪ್ಪ, (ಮುಳಬಾಗಿಲು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನವರು ಹೊಸ ಪ್ರೈಮರಿ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಅನುಮತಿ ಕೋರಿ ಸರ್ಕಾರಕ್ಕೆ: ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಇ) ಸರ್ಕಾರಕ್ಕೆ ಹಣದ ಕೊರತೆ ಇದ್ದಲ್ಲಿ 1993–94ನೇ ಸಾಲಿನಲ್ಲಿ ಕನಿಷ್ಟ ಬ್ರಾಂಚ್ ಪ್ರಾಥಮಿಕ ಶಾಲೆಗಳನ್ನಾದರೂ ಪ್ರಾರಂಭ ಮಾಡಲು ಕ್ರಮಕೈಗೊಳ್ಳುವರೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು

ರಸ್ತೆ ದರೋಡೆಯನ್ನು ತಪ್ಪಿಸಲು ಕೈಗೊಂಡಿರುವ ಕ್ರಮ.

42 (409) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ರಸ್ತೆ ದರೋಡೆ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪಮೊಯಲಿ (ಮುಖ್ಯ ಮಂತ್ರಿಗಳು)

1. ರಸ್ತೆ ದರೋಡೆ ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಈ ಕೆಳಗಿನಂತೆ ಇರುತ್ತವೆ.

1) ಸರ್ಕಾರಿ ಆದೇಶ ಸಂಖ್ಯೆ:ಡಿಇ:273:ಪಿಒಎಸ್ಐಪಿಎ:87 ದಿನಾಂಕ:21–3–88ಕ್ಕೆ ಅನುಗುಣವಾಗಿ ಎರಡು ಡಕಾಯಿತಿ ನಿರೋಧಕ ದಳವನ್ನು ನಿಯೋಜಿಸಲಾಗಿದ್ದು, ಒಂದು ಪಡೆ ಬೆಂಗಳೂರಿನಲ್ಲಿ ಮತ್ತೊಂದು ಬಳ್ಳಾರಿಯಲ್ಲಿರುತ್ತದೆ. ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರೊಬ್ಬರಂತೆ ಈ ಪಡೆಗಳಿಗೆ ಮುಖ್ಯಸ್ಥರಿದ್ದು, ಇವರಿಗೆ ಸಹಕರಿಸಲು ಎರಡು ಡೆಪ್ಯೂಟಿ ಸೂಪರಿಂಟೆಂಡೆಂಡ್ ಆಫ್ ಪೊಲೀಸರು, ನಾಲ್ಕು ಜನ ಪೊಲೀಸ್ ಇನ್ಸ್‌ಪೆಕ್ಟರುಗಳು, ಹದಿನೆಂಟು ಪೊಲೀಸ್ ಕಾನ್ಸ್‌ಟೇಬಲ್‌ಗಳು, ಮತ್ತು ಸಹಾಯಕ ಸಿಬ್ಬಂದಿಗಳು ಇರುತ್ತಾರೆ.

2) ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ:141:ಐಒಪಿ–91 ದಿನಾಂಕ: 3–2–92ರ ಮೇರೆಗೆ ಮತ್ತೊಂದು ಪಡೆ ಮಂಜೂರಾಗಿದ್ದು ಅದಕ್ಕೆ ಒಬ್ಬ ಅಪರ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರನ್ನು ಮತ್ತು ಸಹಾಯಕ ಪಡೆಯನ್ನು ಮಂಜೂರು ಮಾಡಿದ್ದು, ಇವರನ್ನು ಪಡೆಗೆ ನಿಯೋಜಿಸಬೇಕಾಗಿದೆ.

3)ಅಂತರರಾಜ್ಯ ಸಮ್ಮೇಳನ ಮತ್ತು ದಕ್ಷಿಣ ರಾಜ್ಯಗಳ ಮತ್ತು ಮಹಾರಾಷ್ಟ್ರದ ಸಿಐಡಿಯ ಪ್ರಧಾನರ

ಸಮ್ಮೇಳನವನ್ನು ಹೊಸಪೇಟೆಯಲ್ಲಿ 1991 ಏಪ್ರಿಲ್ ತಿಂಗಳಲ್ಲಿ ಏರ್ಪಡಿಸಿದ್ದು, ಡಕಾಯಿತಿ ತಡೆಯುವ ಬಗ್ಗೆ ಚರ್ಚಿಸಲಾಗಿದೆ.

4) ಉನ್ನತ ಮಟ್ಟದ ಸಮ್ಮೇಳನವನ್ನು ದಿ:3–8–91ರಂದು ಬೀದರಿನಲ್ಲಿಯೂ 6–3–92ರಂದು ಬಳ್ಳಾರಿಯಲ್ಲಿಯೂ ಏರ್ಪಡಿಸಲಾಗಿದ್ದು, ಅದರಲ್ಲಿ ಮಾನ್ಯ ಗೃಹ ಮಂತ್ರಿಗಳು ಮತ್ತು ಡಿಜಿಪಿ ಮತ್ತು ಐಜಿಪಿ, ಸಿಒಡಿರವರು ಭಾಗವಹಿಸಿರುತ್ತಾರೆ.

5) ಸಿಒಡಿ, ಐಜಿಪಿರವರ ಸಮ್ಮುಖದಲ್ಲಿ ಕೋಲಾರ, ಹೊಸಕೋಟೆ, ಶಿವಮೊಗ್ಗ, ಬೀದರ್, ಗುಲ್ಬರ್ಗಾ ಮತ್ತು ಬಳ್ಳಾರಿಯಲ್ಲಿ ಜಿಲ್ಲಾಮಟ್ಟದ ಪೊಲೀಸ್ ಅಧಿಕಾರಿಗಳ ಸಭೆಯನ್ನು ನಡೆಸಿದ್ದು ಡಕಾಯಿತಿ ಪ್ರಕರಣಗಳ ಪತ್ತೆ ಮತ್ತು ತಡೆಗೆ ಅಂತರ ಜಿಲ್ಲಾ ಪೊಲೀಸರು ಸಿಒಡಿಯೊಂದಿಗೆ ಮತ್ತು ಜಿಲ್ಲಾ ಪೊಲೀಸ್‌ರೊಂದಿಗೆ ಸಹಕರಿಸಲು ಚರ್ಚಿಸಲಾಯಿತು.

6) ಕೃತ್ಯಕ್ಕೆ ಒಳಗಾಗುವ ರಸ್ತೆಯಲ್ಲಿ ರಾತ್ರಿ ಗಸ್ತು ನೇಮಿಸಿ ರಾತ್ರಿ ಸಂಚರಿಸುವ ವಾಹನಗಳನ್ನು ಗುಂಪು ಗುಂಪಾಗಿ ಕೂಡಿಸಿ ಸಶಸ್ತ್ರ ಪೊಲೀಸ್ ಬೆಂಗಾವಲಿನಲ್ಲಿ ಕಳುಹಿಸಿಕೊಡುವುದು.

7)ಗುಂಪು ಗುಂಪಾಗಿ ಹೋಗುವ ಪ್ರಯಾಣಿಕರ ಬಸ್ಸುಗಳಿಗೆ ಸಿಒಡಿ, ಸಿಬ್ಬಂದಿಯವರು ಬೆಂಗಾವಲು ಹೋಗಲು ತಿಳಿಸಲಾಗಿದೆ.

8) ರಾಜ್ಯ ಮತ್ತು ರಾಜ್ಯದಿಂದ ಹೊರಗೆ ಡಕಾಯಿತರು ತಲೆ ಮರೆಸಿಕೊಳ್ಳುವ ಸ್ಥಳಗಳ ಮೇಲೆ ಆಯಾ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಇದ್ದಕ್ಕಿದ್ದ ಹಾಗೆ ದಾಳಿ ಮಾಡಿದ್ದರಿಂದ 1992ರಲ್ಲಿ 112 ಜನರನ್ನು ಬಂಧಿಸಲಾಗಿದೆ.

9) ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ದರ್ಜೆಯ ಅಧಿಕಾರಿಯೊಬ್ಬರನ್ನು ಅಂತರರಾಜ್ಯ ಡಕಾಯಿತಿ ಕಾರ್ಯಾಚರಣೆಯ ಬಗ್ಗೆ ಸಂಪರ್ಕಾಧಿಕಾರಿಯಾಗಿ ನಿಯೋಜಿಸಲಾಗಿದೆ.

10) ಆಯ್ದ ಡಕಾಯಿತಿ ಕೇಸುಗಳಲ್ಲಿ ಬೆರಳಚ್ಚು ತಜ್ಞರು ಆಗಿಂದಾಗ್ಗೆ ಹೊರ ರಾಜ್ಯಗಳಿಗೆ ಭೇಟಿ ಕೊಡಲು ಕಳುಹಿಸಿಕೊಡಲಾಗಿರುತ್ತದೆ.

11) ಡಕಾಯಿತರ ಭಾವಚಿತ್ರಗಳನ್ನು ಮತ್ತು ವಿವರಣೆಯನ್ನು ಸಿ.ಒ.ಡಿಯ ಸಿ.ಐ.ಬಿಯಲ್ಲಿ ಶೇಖರಿಸಿರುತ್ತದೆ ಇವುಗಳನ್ನು ಡಕಾಯಿತಿ ನಡೆದಾಗ ಡಕಾಯಿತರನ್ನು ಗುರುತಿಸಲು ಉಪಯೋಗಿಸಲಾಗಿರುತ್ತದೆ.

ಪ್ರತಿ ಹೆದ್ದಾರಿಯಲ್ಲೂ ಚಿಕಿತ್ಸಾ ಕೇಂದ್ರವನ್ನು ತೆರೆಯುವುದು.

43 (410) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಪ್ರತಿ ಹೆದ್ದಾರಿಯಲ್ಲಿ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಸರ್ಕಾರ ಯೋಜಿಸಲಾಗಿದೆಯೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಇಲ್ಲ

ಮಂತ್ರಿಗಳಿಗೆ ವಿಧಿಸಿರುವ ನೀತಿ ಸಂಹಿತೆ

44 (411) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)